ಕವಿ ಸಾಹಿತಿ ಸಾಮಾಜಿಕ ಧುರೀಣ

ಬೊಳಂತೂರು ಕೃಷ್ಣ ಪ್ರಭು



ಲೇಖಕರು : ನೀರ್ಪಾಜೆ ಭೀಮ ಭಟ್, ಕನ್ಯಾನ

ಬೆಲೆ : 5-00 ರೂಪಾಯಿಗಳು

ಪ್ರಕಾಶಕರು

ಬೋಳಂತೂರು ಕೃಷ್ಣ ಪ್ರಭು ಮೆಮೋರಿಯಲ್ ಟ್ರಸ್ಟ್



ದಿ| ಬೊಳಂತೂರು ಕೃಷ್ಣ ಪ್ರಭು

ಕವಿ ಸಾಹಿತಿ ಸಾಮಾಜಿಕ ಧುರೀಣ

ಬೋಳಂತೂರು ಕೃಷ್ಣ ಪ್ರಭು

ಲೇಖಕರು :

ನೀರ್ಪಾಜೆ ಭೀಮ ಭಟ್, ಕನ್ಯಾನ

1998

ಕವಿ ಸಾಹಿತಿ ಸಾಮಾಜಿಕ ಧುರೀಣ ಬೋಳಂತೂರು ಕೃಷ್ಣ ಪ್ರಭು

Kavi Sahiti Samajika Dhurina Bolanthoor Krishna Prabhu

ಪ್ರಕಾಶಕರು : ಬೊಳಂತೂರು ಕೃಷ್ಣ ಪ್ರಭು ಮೆಮೋರಿಯಲ್ ಟ್ರಸ್ಟ್
ಬಂಟ್ವಾಳ

ಲೇಖಕರು : ನೀರ್ಪಾಜೆ ಭೀಮ ಭಟ್, ಕನ್ಯಾನ

ಪ್ರತಿಗಳು : 1000

ಮುದ್ರಣ : ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ. Ph : 23398

ಡಿ.ಟಿ.ಪಿ. : ರವಲ್ ಲೇಸರ್ ಟೆಕ್, ಬಂಟ್ವಾಳ. Ph : 23398

ಮೊದಲ ಮಾತು

1999ನೇ ಮಾರ್ಚ್ ತಿಂಗಳಲ್ಲಿ ಇರಾದಲ್ಲಿ ಜರಗಿದ ಬಂಟ್ವಾಳ ತಾಲೂಕು ಆರನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಪ್ರಕಟಿಸಲಾದ ಇಂಚರವೆಂಬ ಸ್ಮರಣ ಸಂಚಿಕೆಯನ್ನು ಸಿದ್ಧಗೊಳಿಸುವ ಸಂದರ್ಭದಲ್ಲಿ ಇರಾ ಪರಿಸರದ ಸಾಹಿತಿ ಕವಿಗಳ ಪರಿಚಯವನ್ನು ಮಾಡುವ ಪ್ರಯತ್ನ ನಡೆಸುತ್ತಿದ್ದಾಗ ಶ್ರೀ ಬೋಳಂತೂರು ಕೃಷ್ಣ ಪ್ರಭುಗಳ ವಿಚಾರಗಳನ್ನು ಸಂಪಾದಿಸುವ ನನ್ನ ಪ್ರಯತ್ನಕ್ಕೆ ನೆರವಾದವರು ಬಂಟ್ವಾಳ ವಿಕ್ಟೋರಿಯಾ ಮುದ್ರಾಶಾಲೆ ಮಾಲಕರಾದ ಶ್ರೀ ಪ್ರಭಾಕರ ಪ್ರಭುಗಳು. ನಮ್ಮೊಳಗೆ ನಡೆದ ಸಂಭಾಷಣೆಯ ಪರಿಣಾಮವಾಗಿ ಶ್ರೀ ಕೃಷ್ಣ ಪ್ರಭುಗಳ ಕುರಿತು ಇಂಚರದಲ್ಲಿ ಸ್ವಲ್ಪ ಅಂಶವನ್ನು ಪ್ರಕಟಿಸಿದೆ. ಸದ್ಯ ಆ ಕುರಿತು ವಿವರವಾದ ಹೊತ್ತಗೆಯನ್ನು ಸಿದ್ಧಗೊಳಿಸಿದ್ದೇನೆ. ಶ್ರೀ ಪ್ರಭಾಕರ ಪ್ರಭುಗಳಿಗೆ ಹಿರಿಯರ ಬಗ್ಗೆ ಇರುವ ಗೌರವಾದರಗಳು ಕಾರಣವಾದಂತೆ, ತಾಲೂಕಿನ ಹಿರಿಯರ ಸ್ಮರಣೆ ಮಾಡುವ ನಮ್ಮ ಉದ್ದೇಶವೂ ಜೊತೆಗೂಡಿದೆಯೆಂದು ತಿಳಿಸಲು ಹರ್ಷಿಸುತ್ತೇನೆ.

ಶ್ರೀ ಕೃಷ್ಣ ಪ್ರಭುಗಳ ಸಾಹಿತ್ಯ ಸೇವೆ ಅಂದಿನ ಕಾಲದಲ್ಲಿ ಎಷ್ಟು ಪ್ರಬುದ್ಧವಾಗಿತ್ತು ಎಂಬುದು ಇಂದಿಗೂ ಸ್ಮರಣೆಯವೆನಿಸುತ್ತದೆ. ಅವರ ಉಚ್ಚ ಸ್ತರದ ಭಾವನೆಗಳು ಇಂಥ ಪ್ರಕಟಣೆಯ ಮೂಲಕ ಅಂಥ ಕೃತಕೃತ್ಯತೆ ಹೊಂದಿರುತ್ತಾರೆ. ಎಂದು ತಿಳಿದಿದ್ದೇನೆ. ಇಂಥ ಯತ್ನ ಅಲ್ಲಲ್ಲಿ ಆದಷ್ಟು ಹೆಚ್ಚು ನಡೆಯಬೇಕು, ಎಂದು ನಂಬಿದ್ದೇನೆ. ಕನ್ನಡದ ಓದುಗರಿಗೆ ಗ್ರಾಮೀಣ ಪರಿಸರದ ಎಲೆಯ ಮರೆಯ ಇಂಥ ಕವಿಗಳು ಸ್ಫೂರ್ತಿ ನೀಡಲಿ ಎಂದು ಹಾರೈಸುತ್ತೇನೆ.

ಇತೀ ತಮ್ಮವನಾದ

(ನೀರ್ಪಾಜೆ ಭೀಮ ಭಟ್)

ಕವಿ ಸಾಹಿತಿ ಸಾಮಾಜಿಕ ಧುರೀಣ
ಬೊಳಂತೂರು ಕೃಷ್ಣ ಪ್ರಭು

ಬೊಳಂತೂರು ಬಂಟ್ವಾಳ ತಾಲೂಕಿಗೆ ಸೇರಿದ ಒಂದು ಹಳ್ಳಿ! ಸುಂದರವಾದ, ಹಚ್ಚ ಹಸುರಿನ ತರುಲತೆ-ಪೈರುಪಚ್ಚೆಗಳಿಂದ ಕಂಗೊಳಿಸುವ ನಿಸರ್ಗ ದೇವತೆಯ ಆಡುಂಬೊಲ ! ಇಲ್ಲಿನ ಪ್ರಶಾಂತ ಮಧುರ ವಾತಾವರಣವು ರಸಿಕರ ಹೃದಯವನ್ನು ರಂಜಿಸುವ ಮೋಹಕತೆ-ಮಾದಕತೆಗಳಿಂದ ಆಕರ್ಷಣೀಯವೆನಿಸಿದೆ.

ಕನ್ನಡದ ಕಸ್ತೂರಿಯ ಸುಗಂಧವನ್ನು ಬಿತ್ತರಿಸಿದ ಕವಿಯೊಬ್ಬರು ಈ ಪರಿಸರದಿಂದ ಮೂಡಿಬಂದುದರಲ್ಲಿ ಅಚ್ಚರಿಯೇನಿಲ್ಲ! ಗತಶತಮಾನದ ಕೊನೆಯಂಚಿನಲ್ಲಿ ಜನಿಸಿದ, ಶ್ರೀ ಬೊಳಂತೂರು ಕೃಷ್ಣ ಪ್ರಭುಗಳು ಈ ಶತಮಾನದ ಆದಿಯ ದಶಕಗಳಲ್ಲಿ ಹೆಸರಾಂತ ಬರಹಗಾರರಲ್ಲೊಬ್ಬರಾಗಿದ್ದರು. ಬಂಟ್ವಾಳ ತಾಲೂಕಿನ ಬೊಳಂತೂರು ಗ್ರಾಮದಲ್ಲಿ 30-11-1882ರಲ್ಲಿ ಜನಿಸಿದ ಶ್ರೀಯುತರು ಉತ್ತಮ ಕವಿಗಳಾಗಿ ರಾಷ್ಟ್ರಭಕ್ತರಾಗಿ ದೈವಭಕ್ತರಾಗಿ ಕೂಡಾ ಹೆಸರಾಗಿದ್ದರು.

ಮನೆಮಂದಿ ಬಂಧು ಬಳಗದವರಿಂದ ದಾಸಪ್ಪ ಪ್ರಭು ಎಂಬುದಾಗಿ ಕರೆಸಿಕೊಳ್ಳುತ್ತಿದ್ದ ಶ್ರೀಯುತರು ಬೊಳಂತೂರು ಗೋವಿಂದ ಪ್ರಭುಗಳ ಏಕಮಾತ್ರ ಪುತ್ರ ಬಂಟ್ವಾಳ ಸಾಹುಕಾರ ರಾಮಚಂದ್ರ ಪ್ರಭುಗಳ ಪುತ್ರಿ ಪೊಮ್ಮಿ ಎಂಬುವರೇ ಇವರ ಮಾತೃಶ್ರೀಯವರು.

ಸಾಹುಕಾರ ಕುಟುಂಬದಲ್ಲಿ ಗಂಡು ಸಂತತಿಯಿರಲಿಲ್ಲ. ಸೋದರ ಮಾವ ಶ್ರೀನಿವಾಸ ಪ್ರಭುಗಳು ಎರಡರ ಹರೆಯದ ಕೃಷ್ಣ ಪ್ರಭುಗಳನ್ನು ಬೊಳಂತೂರಿನಿಂದ ಬಂಟ್ವಾಳಕ್ಕೆ ಕರೆತಂದು ಸಾಕಿ ಸಲಹಿದರು ! ಸ್ಥಳೀಯ ಬಾಸೆಲ್ ಮಿಶನ್ ಶಾಲೆಯಲ್ಲಿ ಇವರ ವಿದ್ಯಾಭ್ಯಾಸ ಏಳನೇ ತರಗತಿಯ ತನಕ ನಡೆಯಿತು. ವಿದ್ಯಾರ್ಥಿಯಾಗಿದ್ದಾಗಲೇ ಇವರಿಗೆ ಅಪಾರವಾದ ದೈವಭಕ್ತಿ.

ಸಾಹಿತ್ಯದ ಬಗ್ಗೆ ಒಲವು, ಹೊಸಹೊಸ ವಿಚಾರಗಳನ್ನು ಗ್ರಹಿಸುವ ಮತ್ತು ಸಂಗ್ರಹಿಸುವ ಆಸಕ್ತಿಯಿತ್ತು. ಶ್ರೀಯುತರು ಬಾಲ್ಯದಲ್ಲಿ ಬಂಟ್ವಾಳದಲ್ಲಿ ತಮ್ಮ ಬಂಧುಗಳ ಆಶ್ರಯದಲ್ಲಿದ್ದಾಗ ಹಲವಾರು ವಿಚಾರಗಳಲ್ಲಿ ಆಸಕ್ತಿ ಬೆಳೆಸಿಕೊಂಡರು. ಅಧ್ಯಯನಕ್ಕೆ ತಕ್ಕ ಅನುಕೂಲತೆಗಳೂ ಇಲ್ಲಿ ಒದಗಿ ಬಂದವು. ಇವರ ಬಂಧುಗಳು ಪೂನಾದಲ್ಲಿದ್ದರು. ಅವರು ಆಗಾಗ ಬಂಟ್ವಾಳಕ್ಕೆ ಬರುತ್ತಿದ್ದರು. ಮರಾಠಿ ಭಾಷೆಯ ಸಂಪರ್ಕ ಇವರಿಗೂ ಉಂಟಾಯಿತು. ಬಂಟ್ವಾಳ ಮನೆಯಲ್ಲಿ ಮರಾಠಿ ಗ್ರಂಥಗಳ ಓದು ಸದಾ ನಡೆಯುತಿತ್ತು. ಮರಾಠಿ ಮತ್ತು ಕೊಂಕಣಿ ನಿಕಟ ಸೋದರ ಭಾಷೆಗಳಾದುದರಿಂದ ಇವರಿಗೆ ಈ ಎರಡೂ ಭಾಷೆಗಳ ಪರಿಣತಿ ಉಪಲಬ್ಧವಾಯಿತು. ಹರಿವಂಶ, ಭಕ್ತವಂಶ ಮೊದಲಾದ ಮರಾಠಿ ಗ್ರಂಥಗಳನ್ನು ಮನೆಯಲ್ಲಿ ಮಧ್ಯಾಹ್ನ ಎರಡು ಗಂಟೆಯಿಂದ ನಾಲ್ಕು ಗಂಟೆ ತನಕ ಓದುವ ಪರಿಪಾಠ ಅಂದು ಬಂಟ್ವಾಳದ ಮನೆಗಳಲ್ಲಿ ನಡೆಯುತ್ತಿದ್ದುದರಿಂದ ಪ್ರಭುಗಳಿಗೆ ಭಾಷಾಜ್ಞಾನ, ವಿಷಯ ಪರಿಜ್ಞಾನ, ದೈವಭಕ್ತಿ, ತಿಳುವಳಿಕೆ ಹೆಚ್ಚಲು ಸಾಧ್ಯವಾಯಿತು. ಪ್ರಸಿದ್ಧ ಮರಾಠಿ ನಾಟಕ ಸಂಗೀತ ಸೌಭದ್ರ ಮೊದಲಾದವುಗಳ ಪರಿಚಯವನ್ನು ಅವರು ಮಾಡಿಕೊಳ್ಳಲು ಅನುವಾಯಿತು.

ಸ್ವಾತಂತ್ರ್ಯದ ಕಿಡಿ :

ಶ್ರೀ ಕೃಷ್ಣ ಪ್ರಭುಗಳು ಓರ್ವ ತತ್ವನಿಷ್ಟ ಕವಿ ಲೇಖಕರಾಗಿ ರಾಷ್ಟ್ರಾಭಿಮಾನಿಯಾಗಿದ್ದಾರೆ. ಸ್ವಾತಂತ್ರ್ಯದ ಕಿಡಿ ಸರ್ವತ್ರ ಉರಿಯುತ್ತಿದ್ದ ದಿನಗಳಲ್ಲಿ ಶ್ರೀ ಪ್ರಭುಗಳು ಬಂಟ್ವಾಳ ಪರಿಸರದಲ್ಲಿ ಅದನ್ನುಉದ್ದೀಪನಗೊಳಿಸುವ ಕಾಯಕವನ್ನು ಶ್ರದ್ಧೆಯಿಂದ ನಡೆಸಿಕೊಟ್ಟಿದ್ದಾರೆ.

ಉಪ್ಪು ಬೇಕೆ ಉಪ್ಪು ಪರಿಶುದ್ಧ ಉಪ್ಪು ||
ತಪ್ಪು ತೆರಿಗೆಗಳ ಒಪ್ಪದಿಹ ಉಪ್ಪು ||
ಸುಲಿಗೆ ನಿಲಿಸುವ ಉಪ್ಪು | ಸುಂಕವಿಲ್ಲದ ಉಪ್ಪು ||
ಜಲನಿಧಿಯು ಕರೆದಿತ್ತ | ತಿಳಿನೀರಿನುಪ್ಪು ||
ಬಿಳಿ ಮುಖಕೆ ಮಸಿ ಕಪ್ಪು ಬಳಸಿ ಭಂಗಿಸಿದುಪ್ಪು
ಛಲದಂಕ ಗಾಂಧಿ ಮಹಾತ್ಮರ ಉಪ್ಪು ||

ಬ್ರಿಟಿಶರ ವಿರುದ್ಧ ಗಾಂಧೀಜಿ ಬಳಸಿದ ಉಪ್ಪಿನ ಸತ್ಯಾಗ್ರಹ ದೇಶದಾದ್ಯಂತ ತೀವ್ರ ಪರಿಣಾಮವನ್ನುಂಟುಮಾಡಿದ ಅಂದಿನ ದಿನಗಳಲ್ಲಿ ಶ್ರೀ ಪ್ರಭುಗಳು ಉಪ್ಪಿನ ಸತ್ಯಾಗ್ರಹದ ಸ್ಪಷ್ಟ ಚಿತ್ರವನ್ನು ಪಡಿಮೂಡಿಸುವ ಸಾಹಸವನ್ನು ನಡೆಸಿದವರು. ಬಿಳಿಯರ ಮುಖಕ್ಕೆ ಮಸಿಕಪ್ಪು ಬಳಿಯುವ ಹೋರಾಟದಲ್ಲಿ ಧೀರ ನಡಿಗೆಯಿಂದ ಹೆಜ್ಜೆಯಿಟ್ಟವರು! ಛಲದಂಕ ಮಲ್ಲ ಗಾಂಧಿ ಎಂಬುದಾಗಿ ಮಹಾತ್ಮರನ್ನು ಗೌರವಿಸಿ, ಉಜ್ವಲ ದೇಶಾಭಿಮಾನವನ್ನು ತೋರ್ಪಡಿಸಿದ ರಾಷ್ಟ್ರ ಭಕ್ತ ಕವಿ! ಇವರು ಪರಿಶುದ್ಧ ಉಪ್ಪು ಕೊಡುವ ಗಾಂಧೀಜಿಯ ಕರೆಯನ್ನು ರಾಷ್ಟ್ರೀಯತೆಯ ಕೆಚ್ಚನ್ನು ಜನರಿಗೆ ಮುಟ್ಟಿಸುವ ಅಸಾಧಾರಣ ಧೋರಣೆಯನ್ನು ಹೊಂದಿದ್ದರು.

ಕೊಂಕಣಿ ಕೃತಿಗಳು

ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಚಳುವಳಿ ಪ್ರಾರಂಭವಾಗಿ ಅರ್ಧಶತಮಾನ ಕಳೆಯಿತು. ಕೊಂಕಣಿಯಲ್ಲಿ ಕಥೆ, ಕವನ, ನಾಟಕ ಮೊದಲಾದ ರಚನೆಗಳನ್ನು ಮಾಡಿ ಕೃತಕೃತ್ಯರಾದವರಲ್ಲಿ ಬೋಳಂತೂರು ಕೃಷ್ಣ ಪ್ರಭು ಪ್ರಮುಖರು. ಕೇವಲ ಪ್ರಾಥಮಿಕ ಶಿಕ್ಷಣವನ್ನಷ್ಟೆ ಪಡೆದ ಇವರು ಕನ್ನಡ ಕೊಂಕಣಿ ಎರಡೂ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಪಡೆದು ಉತ್ತಮ ಕವಿಯಾಗಿ ಮೆರೆದಿರುವ ವಿಚಾರ ಅಚ್ಚರಿಯನ್ನುಂಟುಮಾಡುತ್ತದೆ. 18-11-'82 ರಲ್ಲಿ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಒಂದು ಕುಟುಂಬದಲ್ಲಿ ಇವರ ಜನನವಾಯಿತು. ಸ್ವಂತ ಪರಿಶ್ರಮದಿಂದ ಇವರು ತಮ್ಮ ಸಾಹಿತ್ಯ ಪ್ರೀತಿಯನ್ನು ಬೆಳೆಸಿಕೊಂಡರು. ಬಂಗಾಳಿ, ಸಂಸ್ಕೃತದ ಪರಿಜ್ಞಾನ ಸಂಪಾದಿಸಿಕೊಂಡರು. ಮರಾಠಿ, ಬಂಗಾಳಿ ಕೃತಿಗಳ ಉತ್ತಮ ವಿಚಾರಗಳನ್ನು ಕನ್ನಡ ಹಾಗೂ ಕೊಂಕಣಿ ಭಾಷೆಗಳಲ್ಲಿ ಇವರು ಒದಗಿಸಲು ಸಮರ್ಥರಾದರು.

ಮಂಗಳೂರಿನಲ್ಲಿ ಕೀರ್ತಿಶೇಷರಾದ ಅಮ್ಮೆಂಬಳ ಸುಬ್ರಾಯ ಪೈಗಳ ನೇತೃತ್ವದಲ್ಲಿ 1912ನೇ ಇಸ್ವಿಯಲ್ಲಿ ಪ್ರಾರಂಭವಾದ ಕೊಂಕಣಿ ಪರಿಷತ್ತು ಕೃಷ್ಣಪ್ರಭುಗಳ ಕೊಂಕಣಿ ಭಾಷಾಸೇವೆಗೆ ಎಡೆಮಾಡಿಕೊಟ್ಟಿತು. ಅವರು ತಮ್ಮ

24ನೇ ವರ್ಷದಲ್ಲಿ ಚಂದ್ರಹಾಸ ನಾಟಕವನ್ನು ಕೊಂಕಣಿ ಭಾಷೆಯಲ್ಲಿ ಬರೆದು ಪ್ರಯೋಗಿಸಿದರು. ಅವರ ಸ್ವಂತ ಪ್ರಕಾಶನವಾದ ಸರಸ್ವತಿ ಗ್ರಂಥಮಾಲೆಯ ಮೂಲಕ ಅದನ್ನು ಪ್ರಕಟಿಸಿದರು. ಅವರ ವೃತ್ತಿ ಜೀವನ ಪ್ರಾರಂಭವಾದುದು ಮೆಜಿಸ್ಟ್ರೇಟ್ ಕೋರ್ಟ್‌ನ ಕಾರಕೂನನಾಗಿ! ಅವರ ಕಾವ್ಯ ಪ್ರೇಮ ಸಾಹಿತ್ಯಾಭಿರುಚಿಯಿಂದ ಮುದ್ರಣ ಪ್ರಕಾಶನಗಳ ಆಸಕ್ತಿ ಅವರಲ್ಲಿ ಬಲವಾಗಿ ಚಿಗುರಿತು. ಬಂಟ್ವಾಳದಲ್ಲಿ ಪ್ರಥಮ ಮುದ್ರಾಶಾಲೆ 1914ರಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟಿತು. ಮಂಗಳೂರಿನ ಯುನೈಟೆಡ್ ಆರ್ಟ್ ಪ್ರೆಸ್ ಬಂಟ್ವಾಳದ ದಿವಾಕರ ಛಾಪಖಾನೆಗೂ ಇವರೇ ಕಾರಣರು.

ದಿ| ವಿ. ಎಸ್. ಕುಡ್ವರ ಸಂಪಾದಕತ್ವದಲ್ಲಿ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ 'ಸಾರಸ್ವತ' ವೆಂಬ ಕೊಂಕಣಿ ಸಾಪ್ತಾಹಿಕದಲ್ಲಿ ಪ್ರಭುಗಳ ಹಲವಾರು ಕವಿತೆಗಳು ಕೊಂಕಣಿಯಲ್ಲಿ ಬೆಳಕು ಕಂಡಿವೆ. ಇವರ ಚಂದ್ರಹಾಸ ನಾಟಕ ಅವರ ಜೀವಿತಾವಧಿಯಲ್ಲಿಯೇ ನಾಲ್ಕನೆ ಮುದ್ರಣ ಕಂಡಿದೆ. ಮತ್ತೆ ಐದನೇ ಆವೃತ್ತಿಯು ಬೋಳಂತೂರು ಕೃಷ್ಣ ಪ್ರಭು ಸ್ಮಾರಕ ಟ್ರಸ್ಟ್ ಮೂಲಕ ಅವರ ಜನ್ಮಶತಾಬ್ದಿಯ ಸಂದರ್ಭದಲ್ಲಿ ಪ್ರಕಟವಾಗಿದೆ. ಶ್ರೀ ಪ್ರಭುಗಳ ಕೊಂಕಣಿ ಪದಗಳು ಬಂಟ್ವಾಳ ಸರಸ್ವತೀ ಕಲಾ ಪ್ರಸಾರಕ ಸಂಘದ ಸದಸ್ಯರ ಮೂಲಕ ಮಂಗಳೂರು ಆಕಾಶವಾಣಿಯಿಂದ ಬಿತ್ತರಿಸಲ್ಪಟ್ಟಿದೆ.

ಜಾತ್ಯಾ ಕೊಂಕಣಿಯವರಾದ ಶ್ರೀಯುತರು ತಮ್ಮ ಆಡುಭಾಷೆಯಲ್ಲಿ ಬಹಳಷ್ಟು ಕೃತಿಗಳನ್ನು ರಚಿಸಿದ್ದಾರೆ. ಕೊಂಕಣಿ ಸಂಗೀತ ಚಂದ್ರಹಾಸ ನಾಟಕ ಇವರ ಜನಪ್ರಿಯ ನಾಟಕವೆಂದು ಖ್ಯಾತವಾದರೆ ಪ್ರಹ್ಲಾದ ಚರಿತ್ರೆ, ದ್ರೌಪದೀ ವಸ್ತ್ರಾಪಹರಣ, ಧ್ರುವಚರಿತ್ರೆ, ಶ್ರೀ ಕೃಷ್ಣ ಜನ್ಮಾಷ್ಟಮಿ, ನಳಚರಿತ್ರೆ, ಕೃಷ್ಣ ಸತ್ಯಭಾಮಾ ಸಂವಾದ ಮೊದಲಾದ ಇವರ ನಾಟಕಗಳು ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮಿ ವಿದ್ಯಾಲಯದ ರಂಗಭೂಮಿಯಲ್ಲಿ ಪ್ರದರ್ಶಿತವಾಗಿ ಜನಪ್ರಿಯವೆನಿಸಿವೆ. ನಾಟಕ ಮಾಧ್ಯಮದ ಮೂಲಕ ಇವರು ಊರ ಹತ್ತು ಸಮಸ್ತರನ್ನು ಆಬಾಲವೃದ್ಧರೆನ್ನದೆ ಸೆರೆ ಹಿಡಿದಿದ್ದರು. ಜನರ ನೈತಿಕ ಜೀವನವನ್ನು ರೂಪಿಸುವ ಇರಾದೆ ಅವರಲ್ಲಿ ರೂಢಮೂಲವಾಗಿತ್ತು. ಭಕ್ತಿಪ್ರಧಾನ ನಾಟಕಗಳ ಮೂಲಕ

ಜನರಲ್ಲಿ ಸದ್ಭಾವನೆ ಬೇರೂರುವಂತೆ ಮಾಡುವ ಪ್ರಯತ್ನದಲ್ಲಿ ಅವರು ಸಫಲತೆ ಸಾಧಿಸಿದ್ದರು. ಕೊಂಕಣಿ ಭಾಷೆ ಅಂದಿನ ದಿನಗಳಲ್ಲಿ ಅಲಕ್ಷಿತವಾಗಿದ್ದರೂ ಅವರು ಭಾಷೆಯ ಏಳ್ಗೆ ಸಾಹಿತ್ಯರಚನೆಯ ಮೂಲಕ ಏನು ಸಾಧ್ಯ ಎಂಬುದನ್ನು ಮಾಡಿ ತೋರಿಸಿದ್ದಾರೆ. ಬಂಟ್ವಾಳ ಪರಿಸರದ ಅಂದಿನ ಜನರು ಇವರ ನಾಟಕಗಳ ರುಚಿಯನ್ನುಂಡವರು ಇಂದಿಗೂ ಅಂತಹ ದಿನಗಳನ್ನು ಸ್ಮರಿಸುತ್ತಿದ್ದಾರೆ. ಸಾಹಿತ್ಯ, ಸಂಗೀತ, ನಾಟಕೀಯತೆ, ರಂಗಲಕ್ಷಣಗಳ ಚತುರ ನಿರೂಪಣೆಯನ್ನು ಅವರ ನಾಟಕಗಳು ಸಮರ್ಪಕವಾಗಿ ಸಾಧಿಸಿವೆ. ಪೌರಾಣಿಕ ಕಲ್ಪನೆಯನ್ನು ಜನಮನದಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡುವ ಕಥಾನಕಗಳನ್ನು ಅವರು ಆರಿಸಿಕೊಂಡಿದ್ದುದರಲ್ಲಿ ದೈವಭಕ್ತಿಯ ರಹಸ್ಯವಿದೆ. ಸಮಾಜದ ಒಳಿತಿನ ದೃಷ್ಟಿಕೋನವಿದೆ. ಸಮಾಜ ಬಾಂಧವ್ಯದ ತಿರುಳು ನೆಲೆಯಾಗಿದೆ.

ಸಣ್ಣವರ ಸುಬೋಧ ಶತಕ

ಕನ್ನಡದಲ್ಲಿ ಬರೆಯುವ ಅಭಿರುಚಿಯನ್ನು ಇವರು ಬೆಳೆಸಿಕೊಂಡರು. ಕನ್ನಡದಲ್ಲಿ ಅನನ್ಯ ಪಾಂಡಿತ್ಯವನ್ನು ಸಂಪಾದಿಸಿದ ದಿ| ಪಂಡಿತ ಮುಳಿಯ ತಿಮ್ಮಪ್ಪಯ್ಯ, ದಿ| ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ, ದಿ| ಪಂಜೆ ಮಂಗೇಶರಾಯರು ಮೊದಲಾದವರೊಡನೆ ಇವರು ಸಂಪರ್ಕ ಹೊಂದಿದ್ದರು. ನೈತಿಕ-ಸಾಮಾಜಿಕ ಮೌಲ್ಯಗಳುಳ್ಳ ಕವನಗಳ ರಚನೆಯಲ್ಲಿ ಇವರು ಎತ್ತಿದ ಕೈ ಎನಿಸಿದರು. ಹಿರಿಯ ಕನ್ನಡ ಸಾಹಿತ್ಯಜ್ಞರ ಆದರಕ್ಕೆ ಇವರು ಪಾತ್ರರಾದರು. ಜನಸಾಮಾನ್ಯರಿಗೂ ಬೇಕಾಗುವ ಸರಳ ಸುಲಭ ಶೈಲಿಯಲ್ಲಿ ಕವನಗಳನ್ನು ರಚಿಸಿ ಖ್ಯಾತಿ ಪಡೆದರು. ಕನ್ನಡದಲ್ಲಿ ಇವರು ಬರೆದ "ಸಣ್ಣವರ ಸುಬೋಧ ಶತಕ" ದೊಡ್ಡವರಿಗೂ ಉಪಯುಕ್ತವಾಗುವಷ್ಟು ಸಾರಭರಿತವಾಗಿದೆ. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳು ಈ ಕೃತಿಯ ಕುರಿತು ಬರೆದ ಸಾಲುಗಳು ಕೃತಿಯ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತವೆ. "ಈ ಕೃತಿಯಲ್ಲಿಯ ದ್ವಿಪದಿಗಳು ಸೊಗಸಾಗಿವೆ. ಇವುಗಳಲ್ಲಿಯ ಸುಬೋಧವು ಚಿಕ್ಕವರ ತಿಳಿವಿಗೆ ಎಷ್ಟು ಸುಲಭವಾಗಿದೆಯೋ ಅವರ ಬುದ್ಧಿಯ ಬೆಳವಿಗೆ ಅಷ್ಟೇ ಉಪಕಾರಿಯಾಗಿದೆ. ಶೈಲಿ ಲಘುವಾಗಿ ಅರ್ಥವು ಸವಿಯಾಗುವ ರಚನೆಯನ್ನು ಯಾರು ತಾನೆ ಅಭಿನಂದಿಸರು ?..... ಇಂತಹ ಗದ್ಯಪದ್ಯಕೃತಿಗಳನ್ನು

ತಾವು ರಚಿಸಿ ಕನ್ನಡ ಸಾಹಿತ್ಯವನ್ನು ಬಗ್ಗೆ ಸುಮಂತೆ ಪರಮಾತ್ಮನ ಅನುಗ್ರಹವಾಗಲೆಂದು ನನ್ನ ಹಾರೈಕೆ." 'ಸುಭೋದಶತಕವು ಮಕ್ಕಳ ಪಠಣೆಗೆ ಯೋಗ್ಯವಾದ ಸುಲಭ ಸರಳವೂ ಉದ್ಬೋಧಕವೂ ಆದ ಭಾಷೆ. ಮಕ್ಕಳ ಸಾಹಿತ್ಯದಲ್ಲಿ ಇದಕ್ಕೆ ಯೋಗ್ಯಸ್ಥಾನವು ಸಲ್ಲತಕ್ಕದ್ದಿದೆ' ಎಂಬುದಾಗಿ ಮಂಗಳೂರಿನ ಪ್ರಸಿದ್ಧ ಪತ್ರಿಕೆ ಸ್ವದೇಶಾಭಿಮಾನಿ ಹೇಳಿದೆ.

'ಪುಸ್ತಕದ ವಿಷಯವನ್ನು ಗ್ರಂಥಕರ್ತ ಬಹುಯೋಗ್ಯವಾದ ರೀತಿಯಲ್ಲಿ ಆರಿಸಿರುವರು! ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿತ ಇತರ ವಿಷಯಗಳನ್ನು ಬಹು ಬೇಗ ವೇಳೆ ಮರೆತು ಬರಬಹುದು. ಆದರೆ ಅಲ್ಲಿ ರೂಪುಗೊಂಡ ಅವರ ಶೀಲವು ಮಾತ್ರ ಕಡೆಯ ತನಕ ಉಳಿಯುವಂತಾದ್ದು. ಆದುದರಿಂದ ಶೀಲಕ್ಕೆ ಪ್ರಾಧಾನ್ಯವನ್ನು ಕೊಟ್ಟು ವಿದ್ಯಾಭ್ಯಾಸವನ್ನು ನಡೆಸುವೆಡೆಗಳಲ್ಲಿ ಸುಬೋಧಕ್ಕೆ ಉಚಿತ ಉನ್ನತ ಸ್ಥಾನವಿರಲೇಬೇಕು. ಚಿಕ್ಕ ಬಾಲಕರು ಇಂಥ ಯಾವ ನೀತಿಯ ತತ್ವಗಳನ್ನು ಕಲಿತು ಆಚರಣೆಯಲ್ಲಿ ತರಬೇಕೋ ಅಂಥ ಮಹತ್ವಪೂರ್ಣವಾದ ತತ್ವಗಳನ್ನು ಈ ಗ್ರಂಥಕರ್ತರು ಒಂದುಗೂಡಿಸಿ, ಅವುಗಳನ್ನು ಸುಲಭ ಶಬ್ದಗಳಲ್ಲಿ ಅಚ್ಚಕನ್ನಡ ಭಾಷೆಯಲ್ಲಿ ಮಧುರವಾದ ಶೈಲಿಯಲ್ಲಿ ಪದ್ಯರೂಪವಾಗಿ ಬರೆದಿರುವುದರಿಂದ ಬಾಲಕರು ವಿಷಯವನ್ನು ಸಹಜವಾಗಿ ಗ್ರಹಿಸಿಕೊಂಡು ಬಾಲ್ಯದಲ್ಲಿಯೇ ಕಲಿತು ಸತತವೂ ಸ್ಮರಣೆಯಲ್ಲಿಡಲಿಕ್ಕೆ ಬಹು ಅನುಕೂಲಕರವಾಗಿರುವುದು. ಇಂಥ ಉನ್ನತ ತರಗತಿಯ ಕೃತಿಗಳಲ್ಲಿ ಸುಬೋಧ ಶತಕವೂ ಒಂದಾಗಿರುವುದು.' ಪ್ರಸಿದ್ಧ ಶಿಕ್ಷಣ ತಜ್ಞ ಶ್ರೀ ಬಿ. ಕೆ. ಬಾಳಿಗರು ಮೇಲಿನಂತೆ ಬರೆದಿರುವುದು ಯಥಾರ್ಥವಾಗಿದೆ. ಕೃತಿಯ ಮುನ್ನುಡಿಯಲ್ಲಿ ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಕೃಷ್ಣ ಪ್ರಭುಗಳ ಕಾವ್ಯ ಶಕ್ತಿಯನ್ನು ಕೊಂಡಾಡಿದ್ದಾರೆ.

"ಸಜ್ಜನರ ಸುಭೋಧ ಶತಕ' ಎಂಬ ಕೃತಿಯನ್ನು ಬರೆದ ಮಿತ್ರರಾದ ಬೋಳಂತೂರು ಕೃಷ್ಣ ಪ್ರಭುಗಳವರು ಕನ್ನಡಿಗರಡಿಗೆ ಒಪ್ಪಿಸುತ್ತಾರೆ. ಹಲವು ಆಧುನಿಕ ಕವಿಗಳ ಕಾವ್ಯ ಫಲಗಳಂತೆ ಇದು ಭಾವನಾತರಂಗದಲ್ಲಿ ತೇಲಾಡುವುದಿಲ್ಲ. ಅಂಥ ಸೆಳೆತದ ಹರಿವುಳ್ಳ ಹೊಳೆಯಲ್ಲಿ ಇದು ಬೀಳಲೂ ಇಲ್ಲ. ಬಿದ್ದರೆ ಅವರಣಕೆಯಂತೆ ಚಿಕ್ಕ ಮಕ್ಕಳು ಹಾರಿ ಈಜಾಡಿ ಆ ಹಣ್ಣನ್ನು ಹಿಡಿಯಲಿಕ್ಕೆ ಸಾಧ್ಯವೂ ಇಲ್ಲ.

ಆ ಸಣ್ಣಪರ ಎದೆಯುದ್ದದ ನೀರುಳ್ಳ ಕೊಳದಲ್ಲಿ ಬಿದ್ದು ಮುಳುಗಿ ಮೂಡುತ್ತಿರುವ ಹಣ್ಣುಗಳಂತಿವೆ ಈ ಸುಬೋಧ ಪದ್ಯಗಳು. ಈ ಹಣ್ಣುಗಳನ್ನು ಕೈವಶಮಾಡಿಕೊಳ್ಳುವಾಗ ಮನಶ್ಶರೀರಕ್ಕೆ ತಕ್ಕ ವ್ಯಾಯಾಮವು ಮುಂದಿನ ಘನಘ-ನ ಕಷ್ಟಗಳಲ್ಲಿ ರುಚಿದೋರುವ ಆರೋಗ್ಯವೂ ಒದಗುತ್ತಾ ಬರುವುದೆಂದು ನಂಬಿರುತ್ತೇನೆ. ತಿಮ್ಮಪ್ಪಯ್ಯನವರ ಹಾರೈಕೆಯಂತೆ ಕವಿಗಳಾದ ಕೃಷ್ಣಪ್ರಭುಗಳು ಮನಶ್ಶರೀರಕ್ಕೆ ವ್ಯಾಯಾಮವನ್ನೊದಗಿಸುವ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಶ್ರೀ ಮಹಾದೇವನನು ಭಕ್ತಿಯಿಂ ಭಜಿಸು
ಪ್ರೇಮದಿಂ ಗುರುಗಳಿಗೆ ಶಿರಬಾಗಿ ನಮಿಸು
ತಂದೆ ತಾಯ್ಗಳೊಳಿರಿಸು ಶುದ್ಧ ಭಕ್ತಿಯನು
ಮುಂಪಕದರಿಂದ ಲೇಸುಂಟು ಕೇಳಿನ್ನು
ಚಿಕ್ಕವನು ನೀನಾಗಿ ಬಗ್ಗಿ ಮಾತಾಡು
ಬಂಧು ಬಾಂಧವಮಿತ್ರರೊಂದಿಗನುಕಾಲ
ಸಂದೇಹಿಸದೆ ತೋರು ಸೌಜನ್ಯಶೀಲ

ಗುರು ಹಿರಿಯರಲ್ಲಿ ಭಕ್ತಿ ತುಂಬಿರಬೇಕು. ಅದರಿಂದ ಜೀವನದಲ್ಲಿ ಉತ್ತಮ ಭವಿಷ್ಯವು ಕಾದಿದೆ. ಚಿಕ್ಕವರು ಬಗ್ಗಿ ತಗ್ಗಿ ನಡೆಯಬೇಕು. ಮಾತಾಡುವಾಗ ವಿನಯ ತುಂಬಿರಬೇಕು. ಸೌಜನ್ಯಶೀಲ ನಡವಳಿಕೆ ಸ್ನೇಹ-ಸೌಹಾರ್ದ ವ್ಯವಹಾರವಿರಬೇಕು ಎಂದು ಅವರು ಸಾರಿದ್ದಾರೆ. ಇಂಥ ಹಿತೋಪದೇಶ ಪದ್ಯಗಳಲ್ಲಿ ತುಂಬಿ ತುಳುಕುತ್ತಿರುವುದನ್ನು ಗಮನಿಸಬಹುದು.

ನಿಜ ಜನ್ಮ ಭೂಮಿಯೇ ತಾಯಿಯೆಂದೆಣಿಸು
ಸಾವಧಾನದಿ ಮಾತೃಭೂಮಿಯನು ಭಜಿಸು
ಇದು ಅವರ ರಾಷ್ಟ್ರಭಕ್ತಿಯನ್ನು ಸಂಕೇತಿಸುತ್ತದೆ.

ಮಾತೃ ಭೂಮಿಯ ಬಗ್ಗೆ ಗೌರವಾದರ ತುಂಬಿಸುವ ಕೆಲಸ ಅವರ ಗುರಿಯಾಗಿದ್ದಂತೆಯೇ, ವಿದ್ಯೆಯ ಗುರಿಯನ್ನು ಅವರು ಸೊಗಸಾಗಿ ಸರಳವಾಗಿ

ತಿಳಿಸಿದ್ದಾರೆ. [illegible] ವಿಶ್ವವೇ ಪಾಠಶಾಲೆ, ಅನುಭವ [illegible] [illegible] [illegible] ಅರ್ಥವಾದರೆ ಸಾಕು! [illegible] [illegible] ! [illegible] ? [illegible] [illegible] [illegible] ! [illegible] ಅವರು ಸೊಗಸಾಗಿ ಪ್ರತಿಪಾದಿಸಿದ್ದಾರೆ.

ಲೋಕವಿದು ದೇವನಿರ್ಮಿತ ಪಾಠಶಾಲೆ
[illegible] ಗ್ರಂಥಮಾಲೆ
[illegible]
[illegible]
ಪ್ರತ್ಯಕ್ಷವಾಗಿ ಕಾಣಿಸುವುದು[illegible]
ಮತ್ತೆಲ್ಲಿಹುದು ಬೇರೆ ಪುಸ್ತಕಗಳಿ[illegible]

ಇಲ್ಲಿ ಜಗತ್ತೇ ಪಾಠಶಾಲೆ. [illegible] ಕಲಿಯತಕ್ಕ ಪಾಠ ಎಂಬುದನ್ನು [illegible] ತಿಳಿಸಿದ [illegible] ನಿಜ? ಶತ್ರು-ಮಿತ್ರರ ಬಗ್ಗೆ ಕವಿಯ ವಿವರಣೆ ಗ್ರಾಹ್ಯವಾಗಿದೆ.

ಮನೆಗೆ ಬಂದಿಹ ನಿನ್ನ ಶತ್ರು ಮಿತ್ರನು
[illegible] ಸತ್ಕರಿಸು ಶತ್ರುತ್ವ[illegible]
ಸ್ವೀಕರಿಸುತಭ್ಯಾಗತನ ಧಿಕ್ಕರಿಸಬೇಡ.

....

ಅತ್ಯಧಿಕ ಮಿತ್ರನೊಳು ಮಾಡದಿರು ಸಾಲ
ಅರ್ಥ ಸಂಬಂಧವದು ಸ್ನೇಹಕ್ಕೆ ಶೂಲ

ಅತಿಥಿ ಸತ್ಕಾರದ ಬಗ್ಗೆ ಅವರ ಕಾಳಜಿ ಎದ್ದು ಕಾಣುತ್ತದೆ. ಅತಿಥಿ ದೇವೋಭವ ಎಂಬುದನ್ನು ಸರಳವಾಗಿ ಅವರು ಹೇಳುತ್ತಾರೆ. ಮಿತ್ರ ಶತ್ರುಗಳ ಬಗ್ಗೆ ಅವರು ಸಲಹೆ ಕೊಡುತ್ತಾರೆ. ಸ್ನೇಹಿತರಲ್ಲಿ ಸಾಲ ಮಾಡುವುದು ಬೇಡ! ಸಾಲವು ಶೂಲವೆಂದು ತಿಳಿಸುತ್ತಾರೆ. ಇಂಥ ನೀತಿ ಬೋಧೆ ಮಾಡುವ ಕವಿ ಆಪದ್ಬಾಂಧವರಾಗಿ ಒದಗಿದ್ದಾರೆ.

ದುಷ್ಟನೊಳು ಸ್ನೇಹವನು ಮಾಡಲದರಿಂದ
ಶಿಷ್ಟನಿಗು ತಪ್ಪದೈ ಕಷ್ಟ ನಿರ್ಬಂಧ

ಎನ್ನುವ ಕವಿ

ಕೃಪಣನೊಳು ಸ್ನೇಹವನು ಬಳಸದಿರು ವ್ಯರ್ಥ
ವಿಪುಲ ಸುಖ ದುಃಖದೊಳು ಬಿಡನವನ ಸ್ವಾರ್ಥ

ಯೌವನವು ಜೀವನದ ಮುಖ್ಯ ಘಟ್ಟ ತಾನೇ! ಆಗ ಒಳಿತು ಮಾಡುವ ಎಲ್ಲಾ ಅವಕಾಶಗಳು ಸಿಗುತ್ತವೆ. ಮಾನವನಾಗಿ ಜನಿಸಿ, ಉತ್ತಮ ಕೆಲಸಗಳನ್ನು ಮಾಡುವ ಅವಕಾಶ ಸಾಕಷ್ಟಿದೆ. ಯೌವನವು ಪುರುಷಾರ್ಥ ಸಾಧನೆಗೆ ಹೆದ್ದಾರಿ ಅದು ದುರ್ನಡತೆಗಳೆವ ಹೆಮ್ಮಾರಿಯೆಂಬುದನ್ನು ಕವಿ ತಿಳಿಸಿದ್ದಾರೆ.

ಆರೋಗ್ಯದ ಕಡೆಗೆ ಲಕ್ಷ್ಯವೀಯುವಂತೆ ಮಕ್ಕಳಿಗೆ ಹಿತವಚನ ನೀಡಿರುವ ಅಂಶ ಸಂಗ್ರಾಹ್ಯವಾಗಿದೆ.

ಋತುವಿಗತಿಹಿತವೆನಿಸುವ ವಸ್ತುವನು
ಮಿತವಾಗಿ ಪತಿಕರಿಸು ನಿತ್ಯದೊಳು ನೀನು.
ಒತ್ತಾಯಕ್ಕೊಳಪಟ್ಟು ಹೆಚ್ಚು ಉಣ್ಣಲೂ ಬೇಡ
ಲಜ್ಜೆಗೊಳಗಾಗಿ ದಾಕ್ಷಿಣ್ಯದಿಂದ ಅರೆಹೊಟ್ಟೆ ತಿನ್ನಲೂ ಬೇಡ.
ಎಂಬ ಮಾತನ್ನು ಕವಿ ತಿಳಿಸುತ್ತಾರೆ.

ಆರೋಗ್ಯ ಭಾಗ್ಯವದು ತಾನಾಗಿ ಬಂದು ಸೇರುವುದು ನಿನ್ನಲ್ಲಿ ಪರಿಪಾಲಿಸೆಂದು ಕಿವಿಮಾತನ್ನು ಕವಿ ಹೇಳಿದ್ದಾರೆ.

ಮಕ್ಕಳಿಗೆ ಆರೋಗ್ಯ ರಕ್ಷಣೆಯ ಸೂತ್ರವನ್ನು ಅವರು ತಿಳಿಸುತ್ತಾರೆ.

ವಿದ್ಯೆಯಭ್ಯಾಸಕಾಲಸ್ಯವೇ ವೈರಿ
ಎದ್ದೋಡಿಸದನು ಬಲು ಸಾಹಸವ ತೋರಿ

ವಿದ್ಯೆ ಕಲಿಯುವಂತೆ ಉತ್ತೇಜನ ನೀಡುವುದು ಕವಿಯ ಹಿರಿದಾದ ಉದ್ದೇಶ !ಆಲಸ್ಯವು ಕಡು ವೈರಿ ! ಮಕ್ಕಳಿಗೆ ಓದು ಬರಹ ಸರಿಯಾಗಿ ಸಿಗಬೇಕಾದರೆ, ಆಲಸ್ಯವನ್ನು ಒದ್ದೋಡಿಸಬೇಕು ಎಂದು ಅವರು ಸಾರುತ್ತಾರೆ.

ವಿದ್ಯೆಯೊಂದಿದ್ದವನ ಬುದ್ಧಿ ಹಿರಿದೆಲ್ಲ
ವಿದ್ಯೆಯಿಲ್ಲದ ಮಾನವನಿದ್ದು ಕಾಣಿಲ್ಲ.

ಎಂಬುದಾಗಿ ವಿದ್ಯೆಯ ಮಹತ್ವವನ್ನು ಮಕ್ಕಳಿಗೆ ಮನದಟ್ಟು ಮಾಡುವ ಕವಿ ವಿದ್ಯೆಯಿಂದ ವಿನಯಸಂಪನ್ನನಾಗಬೇಕೆಂದು ಆಶಿಸಿದ್ದಾರೆ. ವಿದ್ಯೆಯನ್ನು ಗಳಿಸಿ ಗರ್ವಿತನಾಗಬೇಡ ಎಂದಿದ್ದಾರೆ. ಮಕ್ಕಳು ಯಾವ ರೀತಿ ನಡತೆ ರೂಪಿಸಿಕೊಳ್ಳಬೇಕು ಎಂಬುದನ್ನು ಅವರು ಚೆನ್ನಾಗಿ ಹೇಳಿಕೊಟ್ಟಿದ್ದಾರೆ.

ಮುಂಜಾನೆ ಯೋಚಿಸು ದಿನದ ಕರ್ತವ್ಯ
ಸಂಜೆಯೂಟವ ಮುಗಿಸಿ ಗುಣಿಸದರ ಫಲವ

ಎಂಬ ಆತ್ಮಾವಲೋಕನ ಕ್ರಮವನ್ನು ಅವರು ಬೋಧಿಸುತ್ತಾರೆ.

ದೈನಂದಿನ ಕೆಲಸಗಳನ್ನು ಪೂರ್ವಯೋಜನೆಯೊಂದಿಗೆ ಸಿದ್ಧಪಡಿಸಿ, ಮಾಡುತ್ತಾ ಹೋಗಬೇಕು. ಸಂಜೆ ಹೊತ್ತಿಗೆ ಅದರ ಫಲಗಳ ಬಗ್ಗೆ ಲೆಕ್ಕಾಚಾರ ಹಾಕುವಾಗ ಸಿದ್ಧಿಗಮ್ಯವಾಗುತ್ತದೆ. ಇಂಥ ಆತ್ಮಾವಲೋಕನ ಕ್ರಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿ ಸೂತ್ರದಂತೆ ವಿವರಿಸಲಾಗಿದೆ.

ಒಳ್ಳೆಯವರ ಸ್ವಭಾವವನ್ನು ಕವಿ ಬಹಳ ಚೆನ್ನಾಗಿ ವರ್ಣಿಸಿದ್ದಾರೆ.

ಚಂದನದ ಮರವನ್ನು ಕಡಿದು ಸುಡಿಸಿದರೂ
ಕುಂದದದು ಪರಿಮಳವ ಕೊಡುತಿಹುದು
ನೀರು ಮೆಟ್ಟಿದರು ಶೀತಲವು
ಕಬ್ಬನ್ನು ಕೊಯ್ದು ಕುಟ್ಟಿದರು
ಸವಿರಸವ ಕೊಡುವುದನು ಬಿಡದು

ಇಂಥ ಒಳ್ಳೆಯ ಸ್ವಭಾವವನ್ನು ಅಳವಡಿಸಿಕೊಳ್ಳುವಂತೆ ಅವರು ಮಾರ್ಗದರ್ಶನ ಮಾಡಿದ್ದಾರೆ.

ಕೆಟ್ಟ ಸ್ವಭಾವವನ್ನು ಅದೇ ರೀತಿ ಬಣ್ಣಿಸಿದ್ದಾರೆ.

ತಿರುಗಾಡುತಿಹುದು ಹಾವದು ವಕ್ರವಾಗಿ
ಹಾಲನ್ನು ಕುಡಿಸಿದರು ವಿಷವನುಗುಳುವುದು

ಇದು ದುಷ್ಟರ ಸ್ವಭಾವ. ಆದುದರಿಂದ ಅವರ ಸಹವಾಸ ಬಿಡಬೇಕು. ಅಂತೆಯೇ ಸುಳ್ಳುನುಡಿ ಕಳ್ಳತನ ಮಿಗೆ

ಮದ್ಯಪಾನದಲ್ಲಿ ತಪ್ಪದು ಕೇಡು
ಬರೆದಿಡು ಪ್ರವೀಣ

ಇಷ್ಟೊಂದು ಚಂದದಿಂದ ಅವರು ಮಕ್ಕಳ ಹೃದಯವನ್ನು ತಟ್ಟುತ್ತಾರೆ. ಮಾನವರಿಗೆ ಅಂಟಿಕೊಂಡ ಕೆಟ್ಟಚಟಗಳನ್ನು ಅವರು ವಿವರಿಸುತ್ತಾರೆ.

ದ್ಯೂತದಾಟವು ದುರಾಚಾರದಂಗಡಿಯು
ದ್ಯೂತಗಾರನೇ ಮಹಾಪಾತಕಕೆ ದೊರೆಯು
ಜೂಜನ್ನು ಬಿಡು ಗರ್ವಪಡಬೇಡ ಪರೋಪಕಾರ ಮಾಡು
ವಿಧುಸೂರ‍್ಯ ಮೇಘನದನದಿ ವೃಕ್ಷಗೋವು
ಮೊದಲಾದವುಗಳು ಪರಹಿತಕೆ ಜನಿಸಿದುವು

ಎಂಬುದನ್ನು ತಿಳಿಸುವ ಮೂಲಕ ಮಾನವನು ಪರಹಿತ ಸಾಧಿಸಬೇಕಾದ ಅಗತ್ಯವನ್ನು ಕವಿ ಒತ್ತಿ ಹೇಳುವ ವೈಖರಿ ಅನ್ಯಾದೃಶವಾಗಿದೆ.

ಯಾವಾಗಲೂ ಪರನಿಂದೆ ಮಾಡಬಾರದು ಎಂಬುದು ಕವಿಯ ಎಚ್ಚರಿಕೆಯ ಮಾತು

ಪರನಿಂದೆಯಿಂದ ನಾಲಗೆಯು ಮಿಗೆ ಮನವು
ಚಿರಕಾಲಕಪವಿತ್ರವಾಗಿ ಕೆಡುತಿಹವು

ನಿರ್ಮಲಾಂತಃಕರಣ ಹೊಂದಿದರೆ, ಮಾತ್ರ ಜೀವನವು ಸ್ಫಟಿಕದಂತೆ ಶುಭ್ರವಾಗುತ್ತದೆ.

ಸರ್ವದಾ ಧರ್ಮಮಾರ್ಗದಿ ನಡೆಯುವವನು
ಸರ್ವತ್ರ ಸನ್ಮಾನ್ಯ ಶ್ರೇಷ್ಠ ಪಂಡಿತನು

ಉತ್ತಮ ಜೀವನವನ್ನು ತಿಳಿಸುವ ಆಶೆ ಎಲ್ಲರೂ ಇದನ್ನು ಅನುಸರಿಸಬೇಕಾದ ವಿಧಾನ, ಸಮಾಜದ ಒಳಿತಿನ ಆಗ್ರಹ ಕವನಗಳಲ್ಲಿ ಮೂಡಿ ಬಂದಿದೆ. ಪಕ್ಷಪಾತ ಮನೋಭಾವ ಬಿಟ್ಟು, ಒಳಿತು ಕೆಡುಕು ನ್ಯಾಯಾನ್ಯಾಯಗಳನ್ನು ವಿಮರ್ಶಿಸಿ, ಸನ್ಮಾರ್ಗವನ್ನು ರೂಪಿಸುವ ಆಶೆ ಪ್ರಬಲವಾಗಿದೆ.

ಸುವಿಚಾರ ಸದ್ಧರ್ಮ ತಕ್ಕಡಿಯ ತೂಗಿ
ತವಕದಲಿ ವಾದವನು ತೀರಿಸಲಾಗಿ

ಎಂಬ ಆಕಾಂಕ್ಷೆಯಿದೆ. ಮಧ್ಯಸ್ಥನು ನ್ಯಾಯಾಧೀಶನಾಗಿ ಕಾರ್ಯದಲ್ಲಿ ಸಮತೂಕ ನೀಡುವಂತಿರಬೇಕು. ಇದು ಸಮಾಜದ ಹಿತಕಾಯುವ ಸೂತ್ರವೆಂಬುದನ್ನು ಕವಿ ಹೇಳಿದ್ದಾರೆ.

ಸಣ್ಣವರ ಸುಬೋಧ ಶತಕದಿಂದ ಕೃಷ್ಣ ಪ್ರಭುಗಳ ಕೀರ್ತಿ ಹೆಚ್ಚಿದೆ. ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿ, ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಜಿಲ್ಲಾ ಎಜುಕೇಶನಲ್ ಕೌನ್ಸಿಲ್‌ಗಳಿಂದ ಪಠ್ಯಪುಸ್ತಕವಾಗಿ ಇದನ್ನು ಆಯ್ಕೆ ಮಾಡಲಾಗಿತ್ತು. ವಿದ್ಯಾರ್ಥಿಗಳ ನೈತಿಕ ಮಟ್ಟವನ್ನು ಎತ್ತರಿಸುವ ಇಂಥಾ ಪದ್ಯಗಳು ಅಂದಿನ ಶಾಲೆಗಳಲ್ಲಿ ಮಾನ್ಯತೆ ಪಡೆದಿದ್ದವು. ಇಂದು ಇಂಥ ಒಂದು ಪದ್ಯವನ್ನಾದರೂ ನಾವು ಕಾಣಲು ಸಾಧ್ಯವೇ ? ನಮ್ಮ ಮಕ್ಕಳಿಂದ ನಾವು ಉತ್ತಮ ಜೀವನ, ಭವ್ಯ ಭಾರತದ ಕನಸನ್ನು ಹೇಗೆ ನಿರೀಕ್ಷಿಸಬಲ್ಲೆವು ?

ದಕಾಯಿತಿ

ಕೃಷ್ಣ ಪ್ರಭುಗಳು ಇನ್ನು ಕೆಲವು ಗ್ರಂಥಗಳನ್ನು ರಚಿಸಿದ್ದಾರೆ. ದಕಾಯಿತಿ ಇವರ ಮನೋಹರವಾದ ಕಾದಂಬರಿ. ಮೈಸೂರು ಕಾದಂಬರಿ ಸಂಗ್ರಹ ಎಂಬ ಮಾಸ ಪತ್ರಿಕೆಯಲ್ಲಿ ಇದು ಪ್ರಕಟವಾಗಿದೆ. ಜಗತ್ತಿನಲ್ಲಿ ಕಂಡುಬರುವ ಸಾಂಸಾರಿಕ ಜೀವನದ ಸ್ಪಷ್ಟ ಚಿತ್ರವನ್ನು ಇಲ್ಲಿ ಕಾಣಿಸಲಾಗಿದೆ. ಕಾದಂಬರಿಗಳು ತಲೆ ಎತ್ತುತ್ತಿದ್ದ

ಆರಂಭದ ದಿನಗಳಲ್ಲಿ ಇದು ಹೊರಬಂದಿರುವುದರಿಂದ ಇದಕ್ಕೊಂದು ವಿಶಿಷ್ಟವಾದ ಮನ್ನಣೆಯ ಮಣೆಯಿದೆ.

ಸುವರ್ಣ ಸಂಪುಟ

ಇದೊಂದು ಐತಿಹಾಸಿಕ ಕಾದಂಬರಿ. ಗಳಗನಾಥರ ಕಾದಂಬರಿಗಳು ಕನ್ನಡದ ಜನರನ್ನು ರಂಜಿಸುವ ಹೊತ್ತಿನಲ್ಲಿಯೇ ಇವರ ಐತಿಹಾಸಿಕ ಕಾದಂಬರಿ ರಚಿತವಾದುದುದು ಕಂಡು ಬರುತ್ತದೆ. ರಜಪೂತರು ಭಾರತದ ಇತಿಹಾಸದಲ್ಲಿ ಮೆರೆದ ದಿನಗಳು ಸುವರ್ಣ ಪುಟಗಳಲ್ಲಿ ದಾಖಲಾಗ ತಕ್ಕವು. ರಜಪೂತರ ಶೌರ್ಯ, ಔದಾರ್ಯ, ಸಾಹಸಗಳ ವೀರಗಾಥೆಗಳು ರೋಮಾಂಚನಗೊಳಿಸತಕ್ಕವು ಎಂಬುದು ಸರ್ವವಿದಿತ ಇಂಥ ಸುವರ್ಣ ಸಂದರ್ಭವನ್ನು ಒಂದು ಸುವರ್ಣ ಸಂಪುಟವನ್ನಾಗಿ ನಿರೂಪಿಸಿ, ಕೃಷ್ಣ ಪ್ರಭುಗಳು ಮಹತ್ತಾದ ಸಾಧನೆಯನ್ನು ತೋರಿದ್ದಾರೆ.

ಮೈಸೂರಿನ ಭಾರತೀ ವಿಲಾಸ ಪತ್ರಿಕೆಯಲ್ಲಿ ಇದು ಪ್ರಕಟವಾಗಿದೆ.

ಮೃಚ್ಛಕಟಿಕ

ಸಂಸ್ಕೃತ ಸಾಹಿತ್ಯದಲ್ಲಿ ಮಹಾ ಕವಿ ಶೂದ್ರಕನು ವಿಶಿಷ್ಟ ಕವಿ ಎನಿಸಿದ್ದಾನೆ. ಮೃಚ್ಛಕಟಿಕವು ಆತನ ಉತ್ಕೃಷ್ಟ ಕೃತಿ! ಮಣ್ಣಿನ ಚಿಕ್ಕ ಬಂಡಿ ಎಂಬ ಅಭಿದಾನವನ್ನು ಹೊಂದಿದ ಈ ನಾಟಕದಲ್ಲಿ ಉತ್ಕೃಷ್ಟ ಮೌಲ್ಯಗಳನ್ನು ಗುರುತಿಸಲಾಗಿದೆ. ದರಿದ್ರನಾದರೂ ಗುಣಿಯಾದ ಚಾರುದತ್ತ ವೇಶ್ಯೆಯಾದರೂ ಗುಣವನ್ನೊಲಿದು ಬರುವ ವಸಂತಸೇನೆ ಹಾಗೂ ಸಾಮಾಜಿಕ ಅನಿಷ್ಟಗಳಿಂದ ಅವರ ಜೀವನದಲ್ಲಾಗುವ ಪರಿಣಾಮಗಳ ಸ್ಪಷ್ಟ ಚಿತ್ರ ಸಮಾಜದ ಮುಖಗಳನ್ನು ಕಾಣಿಸುವಂತಹ ಉತ್ತಮ ರಚನೆಯಾಗಿ ಇದು ಮಾನ್ಯವಾಗಿದೆ. ನವರಸಭರಿತವಾದ ನೀತಿ ಪ್ರಾಧಾನ್ಯವುಳ್ಳ ಈ ನಾಟಕವನ್ನು ಅವರು ಗದ್ಯ ಪದ್ಯಗಳಲ್ಲಿ ಕನ್ನಡಕ್ಕೆ ತಂದಿದ್ದಾರೆ. ಬಂಟ್ವಾಳ ಶ್ರೀ ವೆಂಕಟರಮಣ ಸ್ವಾಮೀ ಸೆಕೆಂಡರಿ ಶಾಲಾ ವಿದ್ಯಾರ್ಥಿಗಳು ಅದನ್ನು ಪ್ರಥಮವಾಗಿ ರಂಗಕ್ಕೆ ತಂದು ಯಶಸ್ವಿಯಾದರು. ಅನಂತರ

ಹಲವಾರು ನಾಟಕ ಮಂಡಳಿಗಳು ಇದನ್ನು ಅಭಿನಯಿಸಿವೆ. ಹೀಗೆ ಇದೊಂದು ಜನಪ್ರಿಯ ನಾಟಕವಾಗಿ ಕನ್ನಡಿಗರ ಆದರವನ್ನುಗಳಿಸುವಂತಾದುದು ಶ್ರೀ ಕೃಷ್ಣಪ್ರಭುಗಳಿಂದಾಗಿ.

ಶ್ರೀ ಪ್ರಭುಗಳು ಉದಾತ್ತ ಮನೋಭಾವದ ಸರಳ ಸಜ್ಜನ ವ್ಯಕ್ತಿ. ಇವರ ದೈವ ಭಕ್ತಿ ಅಸಾಮಾನ್ಯವಾದುದು. ಕನಕದಾಸ ಬರೆದ ಹಾಡುಕ್ರಮದಂತಿದೆ ಅವರ ಜೀವ. ತಮ್ಮ ಏಕೋಪಾಧ್ಯಾಯ ಮುದ್ರಣಶಾಲೆಯಲ್ಲಿ ಅದನ್ನು ಮುದ್ರಿಸಿ, ಪ್ರಕಟಿಸಿ, ಜನರಲ್ಲಿ ಭಕ್ತಿರಸ ಉಕ್ಕೇರುವಂತೆ ಮಾಡಿದ್ದಾರೆ. ಅವರು ಹಲವಾರು ಭಕ್ತಿ ಭಾವ ಪೂರ್ಣ ಕವನಗಳನ್ನು ರಚಿಸಿದ್ದಾರೆ. ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇಗುಲವನ್ನು ವರ್ಣಿಸಿ, ಶ್ರೀ ಪ್ರಭುಗಳು ರಚಿಸಿದ ಪದ್ಯವು ಬಂಟ್ವಾಳದ ಸಕಲ ಭಕ್ತರ ಬಾಯಲ್ಲಿದೆ.

ನೋಡು ಶ್ರೀ ವೆಂಕಟೇಶ್ವರನು | ದಯ | ಮಾಡಿದನು ಭವನವ
ರೂಢಿಯೊಳಿದು ಶ್ರೀ ವೈಕುಂಠವೆಂದು ಆಡುವ ನುಡಿ ನಿಶ್ಚಯ

ಹೀಗೆ ಅವರು ಬಂಟ್ವಾಳ ದೇವಳದ ಹಿರಿಮೆಯನ್ನು ಬಣ್ಣಿಸುತ್ತಾರೆ.

ಬಂದು ನೇತ್ರಾವತಿ ನೀರನ್ನೈದೆ ಮಿಂದವರಘ ಪರಿಹಾರ ಬಯಲಾಗಿ ನೇತ್ರಾವತೀ ನದಿಯ ಹಿರಿಮೆಯನ್ನು ಇದೇ ಸಂದರ್ಭದಲ್ಲಿ ಬಣ್ಣಿಸುತ್ತಾರೆ.ತಮ್ಮ ಕಣ್ಮುಂದೆ ಹರಿಯುವ ನೇತ್ರಾವತಿ ನದಿ ಕವಿಯ ಹೃದಯದಲ್ಲಿ ಮೂಡಿಸಿದ ಪಾವಿತ್ರ್ಯವನ್ನು ಗಮನಿಸಬಹುದು.

ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರ ಸನ್ನಿಧಿಯಲ್ಲಿ ಇವರು ಭಕ್ತಿ ಪೂರ್ವಕ ಅರ್ಪಿಸಿದ ಸಂಕೀರ್ತನೆ ಕೂಡಾ ಇವರ ಭಕ್ತಿಯ ದ್ಯೋತಕವಾಗಿದೆ. ಹೃದಯಾಂತರಾಳದಲ್ಲಿ ಭಕ್ತಿದೀಪಿಗೆ ಬೆಳಗಿ ಹದಿನೆರಡು ಚರಣ ಕವಿತಾಸನೆ ಫಲಗಳಿಂ ಮುದವಾಂತು ಪೂಜಿಸುವೆ ಶ್ರೀ ವಟಪುರೇಶ್ವರನ ಪುಣ್ಯ ಪ್ರೇರಣೆಯಿಂದಲಿ (ಬಂಟ್ವಾಳವು ವಟಪುರವೆಂದು ಖ್ಯಾತವಾಗಿರುವುದನ್ನು ಇವರು ದಾಖಲಿಸಿದ್ದಾರೆ.) ವಟಪುರೇಶ್ವರನ ಕೃಪೆಯನ್ನು ಆಶಿಸಿದ್ದಾರೆ.

ನಾಟಕ ಕವಿ ಜಯದೇವ

ಶ್ರೀಯುತರ ನಾಟಕ ಮಹಾತ್ಮಾ ಕವಿ ಜಯದೇವ ಶಿಖರ ಪ್ರಾಯವಾದುದು. ಭಕ್ತಜನಶಿಖಾಮಣಿ ಜಯದೇವಪದ್ಮಾವತಿಯರ ಬಗ್ಗೆ ಅರಿಯದವರಿಲ್ಲ. ಗೀತ ಗೋವಿಂದದ ಖ್ಯಾತಿಯ ಸಂತ ಜಯದೇವನು ಜೀವನದಲ್ಲಿ ಎದುರಿಸಿದ ಘಟನಾವಳಿಗಳು ದುರ್ಘಟನೆಗಳು ಇದರಲ್ಲಿ ಪ್ರಕಟವಾಗಿವೆ. ಸಾತ್ವಿಕ ರಾಜ ಮತ್ತು ಜಯದೇವನ ಕೃತಿಗಳ ಶ್ರೇಷ್ಠತೆಯ ಪರೀಕ್ಷೆ ನಡೆದು ಜಯದೇವನ ಕೃತಿ ಶ್ರೇಷ್ಠವೆಂದು ಶ್ರೀ ಜಗನ್ನಾಥ ದೇವನ ಸನ್ನಿಧಿಯಲ್ಲಿ ಘೋಷಿತವಾಗುತ್ತದೆ. ನಿರಂಜನ ಶಾಸ್ತ್ರಿಯೆಂಬವನು ಜಯದೇವನ ಮನೆಮಾರುಗಳನ್ನು ಅಪಹರಿಸುತ್ತಾನೆ. ಆತನ ಮನೆ ಸುಟ್ಟು ಹೋದಾಗ ಪಶ್ಚಾತ್ತಾಪದಿಂದ ಜಯದೇವನ ಸಂತ ಮಂಡಲಿಯಲ್ಲಿ ಸೇರಿಕೊಳ್ಳುತ್ತಾನೆ. ಪದ್ಮಾವತಿಯೊಡನೆ ಶ್ರೀ ಕೃಷ್ಣ ಪ್ರೇರಣೆಯಿಂದ ಜಯದೇವನ ವಿವಾಹ ನಡೆಯುತ್ತದೆ.

ಜಯದೇವನಿಗೆ ಶ್ರೀಮಂತನೊಬ್ಬನು ಅಪಾರ ಸಂಪತ್ತನ್ನು ನೀಡಿದಾಗ ಕಳ್ಳರು ಆತನಿಂದ ಅದನ್ನು ಅಪಹರಿಸುತ್ತಾರೆ. ಆತನ ಕೈಕಾಲು ಕಡಿದು ಹಾಕುತ್ತಾರೆ. ಕ್ರೌಂಚ ದೇಶದ ರಾಜನು ಬೇಟೆಗಾಗಿ ಬಂದವನು ಇದನ್ನು ನೋಡಿ ಅರಮನೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸುತ್ತಾನೆ. ಕಳ್ಳರು ಅಲ್ಲಿಗೆ ಬಂದಾಗ ಜಯದೇವನು ಅವರನ್ನು ಸತ್ಕರಿಸಲು ಮುಂದಾಗುವಾಗ ಕೈಕಾಲುಗಳು ಮೊದಲಿನಂತಾಗುವುದು.

ಪದ್ಮಾವತಿಯು ರಾಣಿಯೊಡನೆ ಸಂವಾದ ಮಾಡುತ್ತಿದ್ದಾಗ ನಿಜವಾದ ಪಾತಿವ್ರತ್ಯವೆಂದರೆ ಗಂಡನು ಸತ್ತೊಡನೆ ಪ್ರಾಣ ತ್ಯಜಿಸಬೇಕು ಎನ್ನುತ್ತಾಳೆ. ಆ ಕಳ್ಳರು ಸುಟ್ಟುಹೋದ ಚಿತಾಗ್ನಿಯಲ್ಲಿ ಜಯದೇವನು ಸತ್ತನೆಂದು ಪರೀಕ್ಷೆಗಾಗಿ ಹೇಳುತ್ತಾಳೆ. ಆಗ ಪದ್ಮಾವತಿ ಸಾಯುತ್ತಾಳೆ. ಇದನ್ನು ಕೇಳಿ ಎಲ್ಲರೂ ಶೋಕಾವಿಷ್ಟರಾಗುತ್ತಾರೆ. ಜಯದೇವನು ತನ್ನ ಪ್ರಭಾವದಿಂದ ಪದ್ಮಾವತಿಯನ್ನು ಮತ್ತೆ ಬದುಕಿಸುವನು. ಸುಖಾಂತವಾದ ಈ ನಾಟಕದ ವಸ್ತು ಭಕ್ತಿ ಪ್ರಧಾನವಾಗಿ ರಚಿತವಾಗಿದೆ. ಇದರಲ್ಲಿ ಉತ್ತಮ ಪದ್ಯಗಳೂ ರಚಿತವಾಗಿ ಕವಿ ಪ್ರಭುಗಳ ಸಂಪೂರ್ಣ

ದೈವ ಭಕ್ತಿ ಸಾಹಿತ್ಯಶಕ್ತಿ ಇಲ್ಲಿ ಸರ್ವಾಂಗ ಸುಂದರವಾಗಿ ಮೈಗೂಡಿ ಬಂದಿದೆ.

ಹೀಗೆ ಕೃಷ್ಣ ಪ್ರಭುಗಳ ಸಾಹಿತ್ಯಿಕ ಸಾಮಾಜಿಕ ಜೀವನವು ಮತ್ತು ಕೃತಿಗಳು ಆದರ್ಶಗಳಿಂದ ತುಂಬಿವೆ. ಇಂಥ ಹಿರಿಯರ ಸೇವೆ ಸಾಹಿತ್ಯ ಪ್ರೀತಿ ದೈವಭಕ್ತಿಗಳನ್ನು ಸ್ಮರಿಸುವುದು ಪುಣ್ಯ ಕಾರ್ಯ! ಇಂಥ ಮಹನೀಯರ ಆದರ್ಶವನ್ನು ಅನುಸರಿಸುವ ಕಾರ್ಯವಿಂದು ನಡೆಯಬೇಕು. ಅವರ ಕೃತಿಗಳ ಅಧ್ಯಯನ ನಾಟಕಗಳ ಪ್ರಯೋಗ, ಕವನಗಳ ವಾಚನ ನಿರಂತರ ನಡೆಯಬೇಕು. ನೀತಿಕಥೆ, ಬೋಧನೆಗಳೇ ಪ್ರಧಾನವಾಗಿರುವ ಅವರ ಕವಿತೆಗಳು ಮಕ್ಕಳಿಗೆ ಕಂಠಸ್ಥವಾಗಬೇಕು. ಅದನ್ನೇ ಮೆಲುಕುಹಾಕುವಂಥ ಅವಕಾಶ ವಿದ್ಯಾರ್ಥಿಗಳಿಗೆ ಲಭಿಸಿದರೆ, ಅವರ ಜೀವನಕ್ಕೆ ಅದೊಂದು ದಾರಿದೀಪವಾದೀತು! ಅಂಥ ಶಕ್ತಿ ಅವರ ಕವನಗಳಲ್ಲಿವೆಯೆಂಬುದು ನಿರ್ವಿವಾದ.

ದಿವಂಗತ ಬೋಳಂತೂರು ಕೃಷ್ಣ ಪ್ರಭು ವಿರಚಿತ
ಕೊಂಕಣಿ ಪುಸ್ತಕಗಳು

1. ಚಂದ್ರಹಾಸ ನಾಟಕ
2. ಪ್ರಹ್ಲಾದ ಚರಿತ್ರ, ನಾಟಕ
3. ದ್ರೌಪದಿ ವಸ್ತ್ರಾಪಹರಣ
4. ಧ್ರುವ ಚರಿತ್ರ
5. ಶ್ರೀಕೃಷ್ಣ ಜನ್ಮಾಷ್ಟಮಿ
6. ನಳ ಚರಿತ್ರ
7. ಕೃಷ್ಣ ಸತ್ಯಭಾಮಾ ಸಂವಾದು

ಕನ್ನಡ ಪುಸ್ತಕಗಳು

1. ಮೃಚ್ಛಕಟಿಕ ನಾಟಕ
2. ಕವಿ ಜಯದೇವ ನಾಟಕ
3. ಸಣ್ಣವರ ಸುಬೋಧ ಶತಕ

ಪುಸ್ತಕಗಳು ದೊರೆಯುವ ಸ್ಥಳ:

ಬೋಳಂತೂರ ಕೃಷ್ಣಪ್ರಭು ಸ್ಮಾರಕ ಟ್ರಸ್ಟ್,
ಬಂಟ್ವಾಳ - 574 211. (ದ.ಕ.)

Bolanthoor Krishna Prbhu Memorial Trust
Bantval - 574 211, D.K.

ಮುದ್ರಕರು : ವಿಕ್ಟೋರಿಯಾ ಪ್ರಿಂಟಿಂಗ್ ವರ್ಕ್ಸ್, ಬಂಟ್ವಾಳ Ph : 23398
ಡಿ.ಟಿ.ಪಿ. : ರವಳ್ ಲೇಸರ್ ಟೆಕ್, ಬಂಟ್ವಾಳ, Ph : 23398